<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ</u>

<u>ಸಿ.ಸಿ.ನಂ.4264/2023</u>

| | | | |
|---|---|---|---|
| ಹೆಸರು | : | ಕಾಂತರಾಜು | ಸಿ .ಡಬ್ಲ್ಯೂ :5 |
| ತಂದೆ ಹೆಸರು | : | ವೀರಣ್ಣ | ಪಿ .ಡಬ್ಲ್ಯೂ :3 |
| ವಯಸ್ಸು | : | 34 ವರ್ಷ | |
| ಉದ್ಯೋಗ | : | ಅಂಗಡಿ ವ್ಯಾಪಾರ | |
| ವಾಸಸ್ಥಳ | : | ಪ್ರಭುವನಹಳ್ಳಿ | |

ಸಾಕ್ಷಿಯನ್ನು ದಿಃ 16-06-2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>

ನಿಪಿ -2 ಮತ್ತು 3 ರಲ್ಲಿ ಸಾಕ್ಷಿಯು ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -2 (ಬಿ ) ಮತ್ತು 3( ಎ ) ಎಂದು ಗುರುತಿಸಲಾಯಿತು.

ಸುಮಾರು ಮೂರು ವರ್ಷದ ಹಿಂದೆ ಒಂದು ದಿನ ಮಧ್ಯಾಹ್ನದ ಸಮಯದಲ್ಲಿ ಗುಬ್ಬಿಯ KSRTC ಬಸ್ ನಿಲ್ದಾಣದ ಬಳಿ ನಾನು , ಚಾಸಾ -6 ರವರು ನಿಂತಿದ್ದಾಗ ಪೊಲೀಸರು ಅಲ್ಲಿಗೆ ಬಂದು ನಿಪಿ-2 ಮತ್ತು 3 ಕ್ಕೆ ನಮ್ಮ ಸಹಿ ಪಡೆದಿದ್ದಾರೆ . ನಿಪಿ-2 ಮತ್ತು 3 ರಲ್ಲಿ ಏನು ಬರೆದಿದೆ ಗೊತ್ತಿಲ್ಲ . ಪೊಲೀಸರ ಕೋರಿಕೆಯ ಮೇರೆಗೆ ನಿಪಿ-2 ಮತ್ತು 3 ಕ್ಕೆ ಸಹಿ ಮಾಡಿದ್ದೇನೆ . ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ . ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ . ನಿಪಿ -2 ರಡಿಯಲ್ಲಿ ಪೊಲೀಸರು ನನ್ನ ಸಮಕ್ಷಮ ಏನನ್ನು ವಶಪಡಿಸಿಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಪ್ರಾಜ್ಞ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು, ಅದರಂತೆ ಅನುಮತಿ ನೀಡಲಾಯಿತು.

<u>ಪಾಟೀಸವಾಲುಃ ಸ ಸ ಅ ರವರಿಂದಃ</u>-

ನಿಪಿ -2 ಮತ್ತು 3 ರಲ್ಲಿನ ಮತ್ತು ಹೇಳಿಕೆಯಲ್ಲಿನ ವಿವರಗಳನ್ನು ಓದಿ ತಿಳಿಸಲಾಗಿ ಸಾಕ್ಷಿ ಅದನ್ನು ಅಲ್ಲಗಳೆದಿದ್ದಾರೆ . ಸಾಕ್ಷಿಯು ಅಲ್ಲಗಳೆದ ಹೇಳಿಕೆಯನ್ನು ನಿಪಿ -4 ಎಂದು ಗುರುತಿಸಲಾಯಿತು . ಆರೋಪಿತರನ್ನು ತೋರಿಸಲಾಗಿ ಅವರ ಮಾಹಿತಿ ಇಲ್ಲ ಎಂದು ತಿಳಿಸಿದ್ದಾರೆ . ಮು ಮಾ -1 ನ್ನು ತೋರಿಸಲಾಗಿ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ತಿಳಿಸಿದ್ದಾರೆ . ಆರೋಪಿತರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಪಾಟೀಸವಾಲು:  ಆರೋಪಿ ಪರ  ವಕೀಲರಿಂದಃ- ಇಲ್ಲ ಎಂದು ತಿಳಿಸಿದ್ದಾರೆ .

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ ,  ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.